**ಪ್ರಧಾನ ಸಿವಿಲ್ ನ್ಯಾಯಾಧೀಶರು**
**ಮತ್ತು ಪ್ರ. ದ. ನ್ಯಾ. ದಂ.ಗಳ ನ್ಯಾಯಾಲಯ, ಚಿಕ್ಕೋಡಿ.**

OS:395/14
Pw: 1

ಸಾಕ್ಷಿಯನ್ನು ದಿನಾಂಕ 11-02-2026 ರಂದು ಪ್ರಮಾಣೀಕರಿಸಲಾಯಿತು.

ಮುಂದು ವರೆದ ಪಾಟೀ ಸವಾಲು - ಪ್ರತಿವಾದಿ 2 ಪರ ಶ್ರೀ ಆರ್ ಡಿ ಪಿ ಪವಕೀಲರಿಂದಃ

12) ದಾವೆ ಮಾಡಿದಾಗ ಸರ್ವೆ ನಂಬರ 172/ಓ ಎಂದು ಇತ್ತು. ಆಗ ಅದರ ಒಟ್ಟು ಕ್ಷೇತ್ರ 13 ಎಕರೆ ಎಂದು ನಮೂದ ಇತ್ತು ಎಂದರೆ ಸರಿ. ದಾವೆ ಮಾಡಿದಾಗ ಸರ್ವೆ ನಂ.172/ಓ ರಲ್ಲಿ ದುಂಡಪ್ಪಾ ಸಿದ್ದಪ್ಪಾ ಖದ್ದನ್ನವರ, ಬೀರೇಶಿ ಸಿದ್ದಪ್ಪಾ ಖದ್ದನ್ನವರ ಮತ್ತು ಮಹಾದೇವ ಶಿವಲಿಂಗ ಇಟಿ ರವರ ಹೆಸರು RTC ಯ ಕಬ್ಜಾ ವಹಿವಾಟ ಕಾಲಂ ನಲ್ಲಿ ನಮೂದ ಇತ್ತು ಎಂದರೆ ಸರಿ. ದಾವೆಯ ಪೂರ್ವದಲ್ಲಿ ಸದರಿ ವ್ಯಕ್ತಿಗಳಲ್ಲಿ ಸದರಿ ಆಸ್ತಿಗೆ ಸಂಬಂಧಿಸಿದಂತೆ ಫೋಡಿ ಆಗಿ ಉತಾರ ಸಹ ಆಗಿದ್ದವು. ದುಂಡಪ್ಪಾ ಸಿದ್ದಪ್ಪಾ ಖದ್ದನ್ನವರ ಮತ್ತು ಮಹಾದೇವ ಶಿವಲಿಂಗ ಇಟಿ ರವರಿಗೆ ಪ್ರಸ್ತುತ ಪ್ರಕರಣದಲ್ಲಿ ಪಕ್ಷಗಾರನಾಗಿ ಮಾಡಿಲ್ಲ ಎಂದರೆ ಸರಿ.

13) ದಾವೆಯ ಪೂರ್ವದಲ್ಲಿ ದಾವಾ ಆಸ್ತಿಯ ಬೆಲೆ ಎಷ್ಟು ಆಗುತ್ತದೆಂದು ಉಪ ನೋಂದಣಿ ಕಛೇರಿಯಲ್ಲಿ ಅರ್ಜಿ ಮಾಡಿ ಅದರ ಪ್ರತಿಯನ್ನು ಹಾಜರ ಮಾಡಿಲ್ಲ ಎಂದರೆ ಮಾಡಿದ್ದೇನೆ. ದಾವಾ ಆಸ್ತಿಯ ಬೆಲೆ 6 ಲಕ್ಷ ಮೇಲಿತ್ತು ಎಂದು ಯಾವುದೇ ಪ್ರಮಾಣ ಪತ್ರವನ್ನು ಅಥವಾ ವ್ಯಾಲೂವೇಷನನ್ನು ನಾನು ಹಾಜರು ಮಾಡಿಲ್ಲ ಎಂದರೆ ಅದರ ಬೆಲೆ 6 ಲಕ್ಷ ಅಷ್ಟು ಇರಲಿಲ್ಲ ಎಂದು ನುಡಿಯುತ್ತಾರೆ. ಆ ರೀತಿ ದಾಖಲಾತಿ ಹಾಜರು ಮಾಡಿಲ್ಲ ಎಂದರೆ ಮಾಡಿದ್ದೆನೆ. ಮಾಡಿದ್ದೆನೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆಂದರೆ ಸರಿ ಅಲ್ಲ.

14) ಪ್ರತಿವಾದಿ 1 ರವರು ಜಮೀನ ಮಾರಾಟ ಮಾಡುವವರು ಇದ್ದಾರೆಂದು ದಿನಾಂಕ 30-06-2014 ರಲ್ಲಿ ಕರಾರು ಮಾಡುವ ಒಂದು ವಾರ ಮುಂಚೆ ಗೋತ್ತಾಗಿರುತ್ತದೆ. ಸದರಿ ವಿಚಾರ ಪ್ರತಿವಾದಿ 1 ರವರು ನನಗೆ ತಿಳಿಸಿರುತ್ತಾರೆ. ಸದರಿ ವ್ಯವಹಾರ ಪಂಚರ ಮೂಲಕ ಆಗಿರುತ್ತದೆ. ಪಂಚರ ಹೆಸರು ಬಾಳಪ್ಪಾ ಸಿದ್ರಾಮ ಕರೋಶಿ, ಬಸವಣ್ಣಿ ದುಂಡಪ್ಪಾ ಮುತ್ನಾಳೆ , ಶಿವಗೌಡಾ ಕಲಗೌಡಾ ಬೋರಣ್ಣವರ, ವಿಠ್ಠಲ ಭೀಮಗೌಡಾ ಪಾಟೀಲ ಎಂದು ಇರುತ್ತದೆ. ನಾವೆಲ್ಲರೂ ಪ್ರತಿವಾದಿ 1 ರವರ ಮನೆಯಲ್ಲಿ ಕೂಡಿರುತ್ತೆವೆ.

14

ನನಗೆ ತಾರೀಖ ಮತ್ತು ವಾರ ನೆನಪಿಲ್ಲ. ನಾನು ಮತ್ತು ಪಂಚರು ಪ್ರತಿವಾದಿ 1 ರವರಿಗೆ ಈ ಮುಂಚೆ ವ್ಯವಹಾರ ಮಾಡಿರುವ ಬಗ್ಗೆ ಕೇಳಿರುವುದಿಲ್ಲ. ಅಲ್ಲಿ ಮಾತು ಕತೆ ಆಗಿರುತ್ತದೆ ಕಾಗದವನ್ನು ಬರೆದಿಲ್ಲ. ಪ್ರತಿವಾದಿ 1 ರವರ ಮಕ್ಕಳು ಮತ್ತು ಹೆಂಡತಿರವರನ್ನು ಸಹ ನಾವು ವಿಚಾರಿಸಿರುತ್ತೆವೆ. ಆಗ ಅವರು ಸಾಲ ಹೆಚ್ಚಾಗಿದೆ ಆ ಕಾರಣ ಮಾರುತ್ತಿದ್ದೆವೆ ಎಂದು ಹೇಳಿರುತ್ತಾರೆ. ಸಾಲವನ್ನು ಬ್ಯಾಂಕ ಮತ್ತು ಕೈಗಡವಾಗಿ ತೆಗೆದಿರುತ್ತಾರೆಂದು ಹೇಳಿರುತ್ತಾರೆ ಆದರೆ ಯಾವ ಬ್ಯಾಂಕನಿಂದ ಸಾಲ ತೆಗೆದಿರುತ್ತಾರೆಂದು ಹೇಳಿರುವುದಿಲ್ಲ. ಬ್ಯಾಂಕ ಸಾಲ ನೇರವಾಗಿ ತುಂಬುತ್ತೆವೆ ಉಳಿದ ಹಣ ತುಂಬುತ್ತೆವೆಂದು ಪ್ರತಿವಾದಿ 1 ಮತ್ತು ಅವರ ಹೆಂಡತಿಗೆ ನಾನು ಹೇಳಿಲ್ಲ.

15) ಸಾಕ್ಷಿದಾರರಿಗೆ ಚಿಕ್ಕೋಡಿಗೆ ನಾನು ಕರೆದುಕೊಂಡು ಬಂದಿರುತ್ತೆನೆ. ನಾವು ಚಿಕ್ಕೋಡಿಗೆ ಬಂದಾಗ ಸಮಯ 11 ಗಂಟೆ ಆಗಿತ್ತು. ನಾವು ಚಿಕ್ಕೋಡಿಯಲ್ಲಿ ತಂಗೋಜಿ ವಕೀಲರ ಬಳಿ ಹೋಗಿರುತ್ತೆವೆ. ಅದರ ಪೂರ್ವದಲ್ಲಿ ತಂಗೋಜಿ ವಕೀಲರವರಿಗೆ ನಾನು ಭೇಟಿಯಾಗಿರುವುದಿಲ್ಲ. ತಂಗೋಜಿ ವಕೀಲರದು ಪ್ರತಿವಾದಿ 1 ರವರಿಗೆ ಪರಿಚಯ ಇರುತ್ತದೆ. ನನಗೆ ಪರಿಚಯ ಇರಲಿಲ್ಲ. ತಂಗೋಜಿ ವಕೀಲರು ನನ್ನ ಸಹೋದರ ವಕೀಲರ ಕಛೇರಿಯಲ್ಲಿ ಕೆಲಸ ಮಾಡುತ್ತಾರೆ ಎಂದರೆ ಸರಿ ಅಲ್ಲ. ಕಾಗದವನ್ನು ಪ್ರತಿವಾದಿ 1 ರವರಿಗೆ ಗೋತ್ತಿಲ್ಲದೆ ನಾನು ತಂಗೋಜಿ ವಕೀಲರು ಮತ್ತು ಸಾಕ್ಷಿದಾರರು ತಯಾರಿಸುತ್ತೆವೆ ಎಂದರೆ ಸರಿ ಅಲ್ಲ. ಸದರಿ ಕಾಗದವನ್ನು ಓದಿ ಹೇಳಿರುತ್ತಾರೆ ಎಂದು ನುಡಿಯುತ್ತಾರೆ. ಪ್ರತಿವಾದಿ 1 ರವರಿಗೆ ನಾನು ನಗದಾಗಿ ಹಣ ಕೊಟ್ಟಿರುತ್ತೆನೆ. ಸದರಿ ಹಣವನ್ನು ನಾನು ಬ್ಯಾಂಕದಿಂದ ಡ್ರಾ ಮಾಡಿಕೊಂಡು ಬಂದಿರುತ್ತೆನೆ. ಆ ಕುರಿತು ನನ್ನ ಖಾತೆಯ ಪಾಸಬುಕ್ ಅಥವಾ ರಸೀದಿಯನ್ನು ಹಾಜರುಮಾಡಿಲ್ಲ ಎಂದರೆ ಮಾಡಿದ್ದೆನೆ. ಆ ದಿನ ಪ್ರತಿವಾದಿ 1 ರವರಿಗೆ ಹಣ ಕೊಟ್ಟಿಲ್ಲ ಆ ಕಾರಣ ಪಾಸಬುಕನ್ನು ಹಾಜರು ಮಾಡಿಲ್ಲ ಎಂದರೆ ಸರಿ ಅಲ್ಲ. ಸದರಿ ಹಣದ ಮುಖಬೆಲೆ ಈಗ ಹೇಳಲು ಆಗುವುದಿಲ್ಲ. ಪ್ರತಿವಾದಿ 1 ರವರು ಯಾವುದೇ ಮಾಹಿತಿ ಕೊಡದೆ ಇದ್ದರು ಸಹ ನಾವೇ ಕಾಗದ ತಯಾರ ಮಾಡಿಸಿ ಬ್ಯಾಂಕಿಗೆ ಹೋಗಿ ಲೋನ್ ಮಾಡಿಸಿರುತ್ತೆವೆ ಎಂದರೆ ಸರಿ ಅಲ್ಲ.

16) ಬ್ಯಾಂಕದಲ್ಲಿ ನಾನು ಮತ್ತು ನನ್ನ ಅಣ್ಣತಮ್ಮಂದಿರು ಸಾಲ ಪಡೆದಿರುತ್ತೆವೆ ಎಂದರೆ ಸರಿ. ಸಾಲ ಪಡೆಯುವಾಗ ಅಡಮಾನ ಪತ್ರ ಮಾಡಿರುತ್ತೆವೆ ಎಂದರೆ ಸರಿ. ಸಾಲ ತೆಗೆಯುವಾಗ ಅಡಮಾನ ಪತ್ರ ಮಾಡಿಸಬೇಕು ಅದಕ್ಕೆ ಸಾಕ್ಷಿ ಬೇಕು ಎಂದು ಹೇಳಿ ನಾನು ಮತ್ತು ಸಾಕ್ಷಿದಾರರು ಪ್ರತಿವಾದಿ 1 ರವರದು ಸಹಿಯನ್ನು ಉಪ ನೋಂದಣಿ ಕಛೇರಿಯಲ್ಲಿ ಪಡೆದುಕೊಂಡಿರುತ್ತೆವೆ ಎಂದರೆ ಸರಿ ಅಲ್ಲ. ಪ್ರತಿವಾದಿ 1 ರವರು ಅದು ಖರೀದಿ ಕರಾರು ಪತ್ರ ಎಂದು ಅದರ ಮೇಲೆ ಸಹಿ ಮಾಡಿಲ್ಲಾ ಎಂದರೆ ಸರಿ ಅಲ್ಲ.



17) ಪ್ರತಿವಾದಿ 1 ರವರಿಗೆ ನಾವು ತುಂಬಾ ಸಲ ಭೇಟಿ ಆಗಿರುತ್ತೆವೆ ಆದರೆ ತಾರೀಖ ಮತ್ತು ವಾರ ಹೇಳಲು ಆಗುವುದಿಲ್ಲ. ನನ್ನ ವಕೀಲರಿಗೆ ದಾವೆ ಮಾಡುವಾಗ ಯಾರ ಪಂಚರ ಜೊತೆಯಲ್ಲಿ ಯವಾಗ ಹೋಗಿದೆ ಎಂದು ಮಾಹಿತಿ ಕೊಟ್ಟಿಲ್ಲ ಎಂದರೆ ಕೊಟ್ಟಿದ್ದೆನೆ. ಆ ಬಗ್ಗೆ ನನ್ನ ದಾವೆಯಲ್ಲಿ ಮತ್ತು ಸಾಕ್ಷಿ ಪ್ರಮಾಣ ಪತ್ರದಲ್ಲಿ ಬರೆಸಿಲ್ಲ ಎಂದರೆ ಬರೆಸಿದ್ದೆನೆ. ಆ ದಿನ ಪಂಚರು ಜೊತೆ ಹೋಗಿ ಪ್ರತಿವಾದಿ 1 ರವರಿಗೆ ಭೇಟಿಯಾಗಿಲ್ಲ ಆ ಕಾರಣ ದಾವೆಯಲ್ಲಿ ಬರೆಸಿಲ್ಲ ಎಂದರೆ ಸರಿ ಅಲ್ಲ. ದಾವೆ ಪೂರ್ದಲ್ಲಿ ವಕೀಲರ ಮೂಲಕ ನಾನು ಯಾವುದೇ ನೋಟಿಸ ಕೊಟ್ಟಿಲ್ಲ. ನೋಟಿಸ ಕೊಡಲು ಅಡಚಣೆ ಇರಲಿಲ್ಲ. ಅವರು ಖರೀದಿ ಕರಾರು ಪತ್ರದಂತೆ ನೋಂದಣಿ ಮಾಡಿ ಕೊಟ್ಟಿಲ್ಲ ಎಂದು ಪಂಚರ ಜೊತೆ ಹೋಗಿ ಕೇಳಿರುತ್ತೆನೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆಂದರೆ ಸರಿ ಅಲ್ಲ.

18) ಪ್ರತಿವಾದಿ 1 ಪ್ರಸ್ತುತ ಪ್ರಕರಣದಲ್ಲಿ ತನ್ನ ತಕರಾರು ಪತ್ರ ಹಾಕಿರುತ್ತಾನೆ ಎಂದರೆ ಸುಳ್ಳಾಗಿ ಹಾಕಿರುತ್ತಾನೆ. ಪ್ರತಿವಾದಿ ಪತ್ರದ ಬಗ್ಗೆ ನನಗೆ ಮಾಹಿತಿ ಇಲ್ಲ. ನಾನು ವಕೀಲರಿಂದ ತಕರಾರದ ಬಗ್ಗೆ ತಿಳಿದುಕೊಳ್ಳಲು ಪ್ರಯತ್ನ ಮಾಡಿಲ್ಲ. ಯಾವುದೇ ಕಾರಣ ಇಲ್ಲದೆ ಇದ್ದರೂ ಸಹ ಪ್ರತಿವಾದಿಗಳಿಂದ ಆಸ್ತಿ ಎತ್ತಿಹಾಕಬೇಕೆಂದು ಈ ಸುಳ್ಳು ದಾವೆ ಹಾಕಿರುತ್ತೆನೆ ಎಂದರೆ ಸರಿ ಅಲ್ಲ. ದಾವೆ ಪೂರ್ವದಲ್ಲಿ ಪ್ರತಿವಾದಿ 1 ಮತ್ತು 2 ರವರ ಮಧ್ಯ ಆಗಿರುವ ವ್ಯವಹಾರದ ಬಗ್ಗೆ ನನಗೆ ಮಾಹಿತಿ ಇತ್ತು ಎಂದರೆ ಸರಿ ಅಲ್ಲ. ನಾನು ಪ್ರತಿವಾದಿ 2 ರವರ ಕಬ್ಜಾಗೆ ನಾನು ಹರಕತ್ತ ಮಾಡಿದಾಗ ಅವರು ಪ್ರಸ್ತುತ ದಾವೆಯಲ್ಲಿ ಪಕ್ಷಗಾರನಾಗಿ ಮಾಡಲು ಅರ್ಜಿ ಹಾಕಿದ್ದರು ಎಂದರೆ ಸರಿ ಅಲ್ಲ. ಪ್ರತಿವಾದಿ 1 ರವರು

ಪ್ರತಿವಾದಿ 2 ರವರಿಗೆ ಕರಾರು ಬರೆದುಕೊಟ್ಟ ವಿಚಾರ ನನಗೆ ಗೋತ್ತಿತ್ತು ಎಂದರೆ ಗೋತ್ತಿರಲಿಲ್ಲ. ಅದರಂತೆ ಪ್ರತಿವಾದಿ 1 ರವರು ಪ್ರತಿವಾದಿ 2 ರವರಿಗೆ ಡಿಕ್ರಿ ಮಾಡಿರುವ ವಿಚಾರ ನನಗೆ ಗೋತ್ತಿತ್ತು ಎಂದರೆ ಗೋತ್ತಿರಲಿಲ್ಲ. ಪ್ರತಿವಾದಿ 2 ರವರ ಕಬ್ಜಾಗೆ ನಾವು ಹರಕತ್ತ ಮಾಡಿರುತ್ತೆವೆ ಎಂದರೆ ಕಬ್ಜಾ ದಲ್ಲಿ ಪ್ರತಿವಾದಿ 1 ರವರು ಇರುತ್ತಾರೆ ಪ್ರತಿವಾದಿ 2 ರವರು ಇಲ್ಲ. ಅಲ್ಲಿ ಯಾವುದೇ ಬೆಳೆ ಬೆಳೆದಿರುವುದಿಲ್ಲ, ಜಮೀನು ಪಳಾ ಬಿದಿರುತ್ತದೆ. ಪ್ರತಿವಾದಿ 2 ರವರು ಕಬ್ಜಾದಲ್ಲಿ ಇಲ್ಲ ಆ ಕಾರಣ ಹರಕತ್ತ ಮಾಡುವ ಪ್ರಶ್ನೆ ಇಲ್ಲ.

19) ಪ್ರತಿವಾದಿ 1 ರವರು ಹೋಲದಲ್ಲಿ ಇರುತ್ತಾರೆ. ಪ್ರತಿವಾದಿ 1 ರವರು ನಾಗರಮುನ್ನೋಳಿಯಲ್ಲಿ ವಾಸ ಇಲ್ಲ ಎಂದರೆ ಸರಿ. 2014 ರಿಂದ ಪ್ರತಿವಾದಿ 1 ರವರು ರಾಯಬಾಗದಲ್ಲಿ ಇರುತ್ತಾರೆ ಎಂದರೆ ಅಲ್ಲಿ ಇರುತ್ತಾರೆ ಇಲ್ಲಿಯೂ ಸಹ ಬರುತ್ತಾರೆ. ಪ್ರತಿವಾದಿ 2 ರವರಿಗೆ ಮಾನ್ಯ ಉಚ್ಚ ನ್ಯಾಯಾಲಯದ ಆದೇಶದಂತೆ ಪಕ್ಷಗಾರನಾಗಿ ಮಾಡಿದ್ದು ಅವರು ತಕರಾರು ಹಾಕಿರುತ್ತಾರೆ ಎಂದರೆ ನನಗೆ ಮಾಹಿತಿ ಇಲ್ಲ. ಅವರು ಏನು ತಕರಾರು ಹಾಕಿರುತ್ತಾರೆಂದು ನಾನು ವಕೀಲರ ಮೂಲಕ ತಿಳಿದುಕೊಳ್ಳಲು ಪ್ರಯತ್ನ ಮಾಡಿಲ್ಲ. ಪ್ರತಿವಾದಿ 2 ರವರು 09-11-2010 ರ ಕರಾರದಂತೆ ಡಿಕ್ರಿ



ಮಾಡಿಕೊಂಡು ಅವರೇ ಕಬ್ಜಾ ವಹಿವಾಟದಲ್ಲಿ ಇರುತ್ತಾರೆ ಎಂದರೆ ಸರಿ ಅಲ್ಲ. ಸದರಿ ಡಿಕ್ರಿಯನ್ನು ನಾನು ಪ್ರಶ್ನಿಸಿಲ್ಲ ಎಂದರೆ ಪ್ರಶ್ನಿಸಿರುತ್ತೆನೆ. ಸದರಿ ಡಿಕ್ರಿಯನ್ನು ನ್ಯಾಯಾಲಯದಲ್ಲಿ ಆಹ್ವಾನಿಸಿರುತ್ತೆನೆ. ಯಾವ ನ್ಯಾಯಾಲಯ ಎಂದರೆ ನನಗೆ ಅದು ಹೇಳಲು ಬರುವುದಿಲ್ಲ. ಆ ಬಗ್ಗೆ ದಾಖಲಾತಿಯನ್ನು ಹಾಜರು ಮಾಡಿದ್ದೆನೆ. ನಾನು ಈ ರೀತಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆಂದರೆ ಸರಿ ಅಲ್ಲ. ದುಂಡಪ್ಪಾ ಸಿದ್ದಪ್ಪಾ ಖಗ್ಗನ್ನವರ ರವರ ಜಮೀನನ್ನು ನನ್ನ ಸಹೋದರ ಖರೀದಿ ಮಾಡಿರುತ್ತಾರೆ ಎಂದರೆ ಸರಿ. ಇಸವಿ ನೆನಪಿಲ್ಲ. ಅದರ ಮೊತ್ತ ಸಹ ನನಗೆ ಗೋತ್ತಿಲ್ಲ. ಪ್ರತಿವಾದಿ 1 ರವರಿಗೆ ಜಮೀನು ಖರೀದಿ ಕೊಡು ಎಂದು ನಾನು ಕಡಿಮೆ ಬೆಲೆಯಲ್ಲಿ ಬೇಡಿದ್ದೆನೆ ಎಂದರೆ ಸರಿ ಅಲ್ಲ. ಆ ಕಾರಣ ಪ್ರತಿವಾದಿ 1 ರವರು ಪ್ರತಿವಾದಿ 2 ರವರಿಗೆ 2010 ರಲ್ಲಿ ಸದರಿ ಜಮೀನನ್ನು 6 ಲಕ್ಷ 48 ಸಾವಿರ ರೂಗಳಿಗೆ ಕರಾರು ಪತ್ರ ಬರೆದುಕೊಟ್ಟಿರುತ್ತಾರೆ ಎಂದರೆ ಸರಿ ಅಲ್ಲ. ಅದಕ್ಕೆ ಮುಂಗಡ ಎಂದು 2 ಲಕ್ಷ ತೆಗೆದುಕೊಂಡು ಉಳಿದ ಹಣವನ್ನು ನ್ಯಾಯಾಲಯದ ಮುಂದೆ ಪಡೆದುಕೊಂಡು ಡಿಕ್ರಿ ಮಾಡಿಕೊಟ್ಟರು ಎಂದರೆ ಸರಿ ಅಲ್ಲ. ಪ್ರತಿವಾದಿ 1 ರವರು ನಮಗೆ ಜಮೀನ ಖರೀದಿ ಕೊಟ್ಟಿಲ್ಲ ಎಂದು ಖೊಟ್ಟಿ ಕರಾರು ಪತ್ರ ತಯಾರಿಸಿ ಖೊಟ್ಟಿ ದಾವೆ ಹಾಕಿರುತ್ತೆನೆ ಎಂದರೆ ಸರಿ ಅಲ್ಲ.

20) ಪ್ರತಿವಾದಿ 2 ರವರ ಕಬ್ಜಾ ವಹಿವಾಟಿಗೆ ತೊಂದರೆ ಮಾಡಬೇಕೆಂದು ನಾನು ಮತ್ತು ನಮ್ಮ ಅಣ್ಣತಮ್ಮಂದಿರು ಕೌಂಟರ ಕ್ಲೆಮ್ ಸಹ ಮಾಡಿರುತ್ತೆವೆ ಎಂದರೆ ಸರಿ ಅಲ್ಲ. ಅದಕ್ಕೆ ನಾವು ತಕರಾರು ಹಾಕಿರುತ್ತೆವೆ ಎಂದರೆ ಸರಿ ಅಲ್ಲ. ಪ್ರತಿವಾದಿ 1 ರವರು ಈಗಾಗಲೇ ಪ್ರತಿವಾದಿ 2 ರವರಿಗೆ ಕರಾರು ಪತ್ರ ಬರೆದುಕೊಟ್ಟಿಂದರಿಂದ ನನಗೆ ಕರಾರು ಪತ್ರ ಬರೆದುಕೊಡುವ ಪ್ರಶ್ನೆ ಬರುವುದಿಲ್ಲ ಎಂದರೆ ಸರಿ ಅಲ್ಲ. ಪ್ರತಿವಾದಿ 1 ರವರಿಗೆ ಮತ್ತು ಸದರಿ ಆಸ್ತಿಗೆ ಪ್ರತಿವಾದಿ 2 ಪರ ಡಿಕ್ರಿ ಆದ ನಂತರ ಯಾವುದೇ ಸಂಬಂಧ ಇಲ್ಲ ಎಂದರೆ ಸರಿ ಅಲ್ಲ. ದಾವೆ ಮಾಡುವಾಗ ಪ್ರತಿವಾದಿ 1 ರವರು ದಾವಾ ಆಸ್ತಿಯ ಮಾಲೀಕರು ಇರಲಿಲ್ಲ ಎಂದರೆ ಸರಿ ಅಲ್ಲ. ದಾವಾ ಜಮೀನನ್ನು ಕಬಳಿಸಬೇಕೆಂದು ಸುಳ್ಳು ದಾವೆ ಹಾಕಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆಂದರೆ ಸರಿ ಅಲ್ಲ.

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)

ಓ. ಹೇ. ಕೇ. ಸರಿ ಇದೆ.

sd/-

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು

ಪ್ರ.ದ.ನ್ಯಾ.ದಂ.ಗಳು, ಚಿಕ್ಕೋಡಿ.